ಓಎಸ್ ನಂ.45/2021
ಪಿಡಬ್ಲ್ಯೂ ಃ 1 **(ಸುಮಿತ್ ಕುಮಾರ್)**
ದಿನಾಂಕಃ 19.08.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿದ್ದು ಅದಕ್ಕೆ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರೆದ ಮುಖ್ಯವಿಚಾರಣೆಃ- ವಾದಿ ಪರ ಶ್ರೀ ಬಿ.ಎನ್ ವಕೀಲರಿಂದಃ-**

ಸಾಲದ ಅರ್ಜಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು, ಪ್ರನೋಟ್‌ನ್ನು ಹಾಜರುಪಡಿಸಿದ್ದು ಅದನ್ನು ನಿಪಿ 2 ಎಂದು, ಅದರಲ್ಲಿನ ಮೃತ ಪುರುಷೊತ್ತಮ್‌ರವರ ಮತ್ತು 5ನೇ ಪ್ರತಿವಾದಿಯ ಸಹಿಗಳನ್ನು ನೋಡಿ ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 2(ಎ) ಮತ್ತು ನಿಪಿ 2(ಬಿ) ಎಂದು, ಮೆಮೋರೆಂಡಮ್ ಆಫ್ ಅಗ್ರಿಮೆಂಟ್‌ನ್ನು ಹಾಜರುಪಡಿಸಿದ್ದು ಅದನ್ನು ನಿಪಿ 3 ಎಂದು ಹಾಗೂ ಅದರಲ್ಲಿರುವ ಮೃತ ಪುರುಷೊತ್ತಮ್‌ರವರ ಮತ್ತು 5ನೇ ಪ್ರತಿವಾದಿಯ ಸಹಿಗಳನ್ನು ನೋಡಿ ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 3(ಎ) ಮತ್ತು ನಿಪಿ 3(ಬಿ) ಎಂದು, ನೊಂದಾಯಿತ ಸಿಂಪಲ್ ಮಾರ್ಟ್‌ಗೇಜ್ ಡೀಡ್‌ನ್ನು ಹಾಜರುಪಡಿಸಿದ್ದು ಅದನ್ನು ನಿಪಿ 4 ಎಂದು, ಎರಡು ಲೆಟರ್ ಆಫ್ ರಿವೈವಲ್‌ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 5 ಮತ್ತು 6 ಎಂದು, ಸ್ಟೇಟ್‌ಮೆಂಟ್ ಆಫ್ ಅಕೌಂಟ್‌ನ್ನು ಹಾಜರುಪಡಿಸಿದ್ದು ನಿಪಿ 7 ಎಂದು, 4 ಆರ್.ಟಿ.ಸಿ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 8 ರಿಂದ 11 ಎಂದು, ಲೀಗಲ್ ನೋಟಿಸ್ಸನ್ನು ಹಾಜರುಪಡಿಸಿದ್ದು ಅದನ್ನು ನಿಪಿ 12 ಎಂತಲೂ, 3 ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 13 ರಿಂದ 15 ಎಂದು, ಮೂರು ಅಂಚೆ ರಶೀತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 16 ರಿಂದ 18 ಎಂದು, ಗೆಜೆಟ್ ನೋಟಿಫಿಕೇಷನ್‌ನ್ನು ಹಾಜರುಪಡಿಸಿದ್ದು ಅದನ್ನು ನಿಪಿ 19 ಎಂದು ಗುರುತಿಸಲಾಯಿತು. ಆದುದರಿಂದ

ನಾನು ಹೂಡಿರುವ ದಾವೆಯನ್ನು ಡಿಕ್ರಿ ಮಾಡಬೇಕೆಂದು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ** 1 ರಿಂದ 3ನೇ ಪ್ರತಿವಾದಿಗಳ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಈಗಾಗಲೇ ನ್ಯಾಯಾಲಯವು ಪ್ರತಿವಾದಿ 1 ರಿಂದ 3 ರವರ ಪ್ರತಿವಾದ ಪತ್ರವನ್ನು ಸಲ್ಲಿಸಿಲ್ಲವೆಂದು ತೆಗೆದುಕೊಂಡಿರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ. ಸರಿ. ಇದೆ
ಸಹಿ/-
**(ಈಶ್ವರ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಮುಳಬಾಗಿಲು.